# ಚೈತ್ರದ ಚಿಗುರು



**ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ಚೈತ್ರಾ ರಾವ್, ಚಂದನವನದ ಹೊಸ ಪ್ರತಿಭೆ. ಎಂಥ ಸವಾಲಿನ ಪಾತ್ರವಾದರೂ ಮಾಡುತ್ತೇನೆ ಎಂಬ ವಿಶ್ವಾಸ ಅವರಲ್ಲಿದೆ.**

**■ ಪದ್ಮನಾಭ ಭಟ್**

ತುಂಬಾ ಚಿಕ್ಕ ವಯಸ್ಸಿನಿಂದಲೂ ಆ ಹುಡುಗಿ ಅಂತರ್ಮುಖಿ. ಮನೆಯವರು ಮತ್ತು ತೀರಾ ಆಪ್ತರ ಬಿಟ್ಟರೆ ಬೇರೆಯವರ ಜೊತೆ ಮಾತೂ ಆಡುತ್ತಿರಲಿಲ್ಲ. ಮಾತು ಆಡಿದರೆ ಮುತ್ತುದುರುವುದೇನೋ ಎಂಬ ಸ್ವಭಾವ. ಮಗಳು ಹೀಗೆ ಬೆಳೆಯುವುದು ಅಮ್ಮನಿಗೆ ಇಷ್ಟವಿರಲಿಲ್ಲ. ಸುತ್ತಲಿನ ಸಮಾಜದ ಜೊತೆಗೆ ಬೆರೆಯದೇ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳುವುದು ಹೇಗೆ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ಆಗಲೇ ಪರಿಚಯದವರೊಬ್ಬರು 'ವಿಜಯನಗರ ಬಿಂಬ' ಎಂಬ ರಂಗತಂಡದ ಸುದ್ದಿ ಹೇಳಿದ್ದು. ಆ ರಂಗತಂಡ ವಾರಾಂತ್ಯದಲ್ಲಿ ಮತ್ತು ಬೇಸಿಗೆ ರಜದಲ್ಲಿ ಮಕ್ಕಳಿಗೆ ರಂಗಭೂಮಿ ತರಬೇತಿ ಕೊಡುತ್ತಿತ್ತು. ರಂಗಭೂಮಿ ಕಲ್ಲನ್ನೂ ಮಾತಾಡಿಸುವ ಕಲೆ ಕಲಿಸಿಕೊಡುತ್ತದೆ ಎಂಬ ನಂಬಿಕೆಯಲ್ಲಿ ಮಗಳನ್ನು ಆ ತಂಡಕ್ಕೆ ಸೇರಿಸಿದರು.

ಅದು ಆ ಬಾಲಕಿ ಬದುಕಿನಲ್ಲಿ ಎಳವೆಯಲ್ಲೇ ಸಿಕ್ಕ ದೊಡ್ಡ ತಿರುವು. ಇಂದು ಅದೇ ಹುಡುಗಿ ಅರಳು ಹುರಿದ ಹಾಗೆ ಮಾತಾಡುತ್ತಾಳೆ. ಕ್ಯಾಮೆರಾ ಎದುರು ಹೃದಯ ಕರಗುವ ಹಾಗೆ ನಟಿಸುತ್ತಾಳೆ. ಮೈಮರೆತು ನಾಟ್ಯ ಮಾಡುತ್ತಾಳೆ. ಅವಳ ಹೆಸರು ಚೈತ್ರಾ ರಾವ್.

ಇತ್ತೀಚೆಗೆ ಅಮೆಜಾನ್ ಪ್ರೈಮ್‌ನಲ್ಲಿ ಕೂಡ ಸದ್ದು ಮಾಡುತ್ತಿರುವ ರಾಧಾಕೃಷ್ಣ ರೆಡ್ಡಿ ನಿರ್ದೇಶನದ 'ಮಾಯಾ ಬಜಾರ್' ಸಿನಿಮಾ ನೋಡಿದರು ಚೈತ್ರಾ ಅವರನ್ನು ಮರೆತಿರಲು ಸಾಧ್ಯವಿಲ್ಲ. ಹರೆಯದ ತುಂಟತನ ಮತ್ತು ಮನದುಂಬಿ ಬರುವ ತಾಯ್ತನ ಎರಡನ್ನೂ ತುಂಬ ಸಮರ್ಥವಾಗಿ ವ್ಯಕ್ತಪಡಿಸಿರುವ ಈ ಹುಡುಗಿ ಚಂದನವನದ ಭರವಸೆಯ ಹೊಸ ಫಸಲು.

ವಿಜಯನಗರ ಬಿಂಬದ ಮೂಲಕ ರಂಗಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಚೈತ್ರಾ ಎರಡನೇ ತರಗತಿಯ ಮಗು. 2005ರಲ್ಲಿ ನಾಗಾಭರಣ ನಿರ್ದೇಶನದ 'ಮನಸೇ ಓ ಮನಸೇ' ಎಂಬ ಧಾರಾವಾಹಿಯಲ್ಲಿ ಸುಧಾರಾಣಿಯ ಮಗಳ ಪಾತ್ರದಲ್ಲಿ ನಟಿಸುವುದರ ಜೊತೆಗೆ ಕಿರುತೆರೆಯನ್ನು ಪ್ರವೇಶಿಸಿದರು. ಅಲ್ಲಿಂದ ಒಂದೊಂದಾಗಿ ಅವಕಾಶಗಳು ಸಿಗುತ್ತಲೇ ಹೋದವು. ಅದೇ ವರ್ಷ ಕಿಶನ್ ನಿರ್ದೇಶನದ 'ಕೇರಾಫ್ ಫುಟ್‌ಪಾತ್' ಸಿನಿಮಾದಲ್ಲಿ ಒಂದು ಪಾತ್ರದಲ್ಲಿ ನಟಿಸಿದರು. ಹಾಗೆಯೇ ಅಶೋಕ್ ಕಶ್ಯಪ್ ನಿರ್ದೇಶನದ 'ಆಸ್ತಿ' ಎಂಬ ಸಿನಿಮಾದಲ್ಲಿಯೂ ಕಾಣಿಸಿಕೊಂಡರು. 2006ರಲ್ಲಿ 'ಒಂದು ಪ್ರೀತಿಯ ಕತೆ' ಸಿನಿಮಾದಲ್ಲಿ ಒಂದು ಪಾತ್ರದಲ್ಲಿ ಕಾಣಿಸಿಕೊಳ್ಳುವ ಅವಕಾಶವೂ ಒದಗಿಬಂತು.

ಹೀಗೆ ಒಂದರ ಹಿಂದೆ ಇನ್ನೊಂದು ಅವಕಾಶಗಳು ಸಾಲು ಸಾಲಾಗಿ ಬರತೊಡಗಿದಂತೆ ಚೈತ್ರಾ ಅಮ್ಮನಿಗೆ ಮಗಳ ವಿದ್ಯಾಭ್ಯಾಸದ ಯೋಚನೆ ಆಯಿತು. ಅಲ್ಲಿಗೆ ನಟನಾಲೋಕದ ಬಾಗಿಲು ತಾತ್ಕಾಲಿಕವಾಗಿ ಮುಚ್ಚಿತು. ಚೈತ್ರಾ ಬಿ.ಕಾಂ. ಮಾಡಿದರು. ನಂತರ ಒಂದು

